## ಗೌಪ್ಯತೆ ಮತದ ಮೌಲ್ಯ

ಭಾರತ ಸಂವಿಧಾನದ ಅನ್ವಯ ಜನಪ್ರತಿನಿಧಿಗಳು ಗುಪ್ತ ಮತದಾನದ ಮೂಲಕ ನಿರ್ದಿಷ್ಟ ಕ್ಷೇತ್ರದಿಂದ ಚುನಾಯಿತರಾಗುತ್ತಾರೆ. ಚುನಾವಣೆ ಸಮೀಪಿಸುತ್ತಿದ್ದಂತೆ ನಮ್ಮ ಸುದ್ದಿವಾಹಿನಿಗಳು ಊರೂರಿಗೆ ತೆರಳಿ 'ನೀವು ಯಾರಿಗೆ ಮತ ಹಾಕುತ್ತೀರಿ?' ಎಂದು ಪ್ರಶ್ನಿಸುತ್ತಾ ಜನಸಾಮಾನ್ಯರ ಮೂತಿಗೆ ಮೈಕ್ ಹಿಡಿಯುತ್ತಿದ್ದಾರೆ. ಹೀಗೆ ಪ್ರಶ್ನಿಸುವುದು ಸಂವಿಧಾನ ಬಾಹಿರ ಅಲ್ಲವೇ?

ಇಂತಹ ಪ್ರಶ್ನೆಯನ್ನು ಕೇಳಬಾರದು ಎಂದು ಸುದ್ದಿವಾಹಿನಿಗಳಿಗೆ ಏಕೆ ಅನ್ನಿಸುವುದಿಲ್ಲ. ಇಂತಹ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದಾಗ ಮತದಾರ ಯಾರಿಗೆ ತನ್ನ ಹಕ್ಕನ್ನು ಚಲಾಯಿಸುತ್ತಾನೆ ಎನ್ನುವುದನ್ನು ಡಂಗೂರ ಸಾರಿದಂತೆ ಆಗುತ್ತದೆ. ಇದು ಊರಿನಲ್ಲಿ ದ್ವೇಷದ ವಾತಾವರಣವನ್ನು ಸೃಷ್ಟಿಸಬಹುದು. ಸಂವಿಧಾನದ ನಾಲ್ಕನೇ ಅಂಗ ಎಂದು ಬೀಗುವ ಮಾಧ್ಯಮಗಳು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಮತದಾನದ ರಹಸ್ಯ ಕೇಳುವುದು ವಿಪರ್ಯಾಸ.

—ಪಿ.ಜೆ. ರಾಘವೇಂದ್ರ, ಮೈಸೂರು

## ಗಂಡಸರು! ಅಯ್ಯೋ ಪಾಪ...

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಸೂಪರ್ ಕ್ವೀನ್' ಹಿಂದಿನ ಕಾರ್ಯಕ್ರಮದಲ್ಲಿ ಯಥಾಪ್ರಕಾರ ಗಂಡಸರನ್ನು ಒದೆಯುವುದು, ಎತ್ತಿ ಕುಕ್ಕುವುದು, ಕೆಟ್ಟದಾಗಿ ಬೈಯುವುದು, ಡಬಲ್ ಮೀನಿಂಗ್ ಜೋಕುಗಳು... ಹೊಸತನ ಇಲ್ಲದೆ ಕಾರ್ಯಕ್ರಮ ಸೊರಗುತ್ತಿದೆ. ತೀರ್ಪುಗಾರರು ಮಾತ್ರ ಕೀಲಿ ಕೊಟ್ಟ ಬೊಂಬೆಗಳಂತೆ ಬಿದ್ದು ಬಿದ್ದು ನಗುವುದು ಮಾಮೂಲಿ. ಕುರಿ ಪ್ರತಾಪ್ ಅವರಿಗೆ ಸ್ವಲ್ಪ ಹೆಚ್ಚು ಅವಕಾಶ ಸಿಗಬೇಕು ಅಂತ ಅನ್ನಿಸುತ್ತೆ.

—ಭಾರತೀ ಗಂಗಾಧರ್, ಬೆಂಗಳೂರು

## ಅಶ್ಲೀಲವಿಲ್ಲ, ಆದರೂ ಸಹ್ಯವಲ್ಲ

ಸಿರಿ ಕನ್ನಡದ 'ಯುಗಾಂತರ' ಧಾರಾವಾಹಿ ಎತ್ತ ಹೊರಟಿದೆ? ಇದು ಏನು ಹೇಳುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು 'ಚಿದಂಬರ ರಹಸ್ಯ' ಆಗಿದೆ. ಸಂಬಂಧಗಳನ್ನು ಬೆಸೆಯುವಲ್ಲಿ ವಿಫಲ. ಸಾಮಾಜಿಕವಾಗಿ ರಂಗಧಾಮನ ದ್ವಿಮುಖ ನೀತಿ, ಸ್ವಾರ್ಥ ಗುಣ ಮಿತಿ ಮೀರಿದೆ. ಶೋಷಣೆಯ ಅಂಶವನ್ನೇ ಕೇಂದ್ರವಾಗಿ ಇಟ್ಟುಕೊಂಡು ಕಥೆಯನ್ನು ಹೆಣೆಯಲಾಗಿದೆ. ಜೊತೆಗೆ ಅಲ್ಲಿನ ಸಂಭಾಷಣೆ ಅಶ್ಲೀಲವಲ್ಲದಿದ್ದರೂ ಕುಟುಂಬಸ್ಥರ ಜೊತೆ ಕುಳಿತು ವೀಕ್ಷಣೆ ಮಾಡಲು ಸಹ್ಯವಲ್ಲ. ಈ ಧಾರಾವಾಹಿಯ ಬಗ್ಗೆ ನಾವು ಇಟ್ಟುಕೊಂಡ ನಿರೀಕ್ಷೆ ಹುಸಿ ಆಗಿದೆ.

—ಕೆ. ವೀರಭದ್ರಯ್ಯ ಕುರುಬರಹಳ್ಳಿ, ಕೊರಟಗೆರೆ

ವಾರದ ಪತ್ರ

## ಕಣ್ಣಿದ್ದೂ ಕುರುಡು

ಕೆಲವು ಧಾರಾವಾಹಿಗಳ ಕಥೆ ಮುಂದುವರೆಸಲು ಒಂದು ಹೊಸ ರೀತಿಯ ಕುತಂತ್ರ ಪ್ರಾರಂಭ ಆಗಿದೆ. ನಾನಾ ಕಾರಣಕ್ಕೆ ಕಣ್ಣು ಕಳೆದುಕೊಂಡ ಸನ್ನಿವೇಶವನ್ನು ನಿರೂಪಿಸುತ್ತಾರೆ. ನಂತರ ದೃಷ್ಟಿ ಬಂದರೂ ಕಣ್ಣೇ ಕಾಣದವರ ಹಾಗೇ ನಟನೆ ಮಾಡುತ್ತಿದ್ದಾರೆ. ಇದಕ್ಕೆ ಕಲರ್ಸ್ ಕನ್ನಡದ 'ರಾಮಾಚಾರಿ' ನಾಯಕಿ ಚಾರು, 'ಗಟ್ಟಿಮೇಳ'ದಲ್ಲಿ ನಾಯಕನ ಅಜ್ಜಿಯ ಪಾತ್ರಗಳು ಉದಾಹರಣೆ.

'ಗಟ್ಟಿಮೇಳ'ದ ಅಜ್ಜಿಗಂತೂ ದೃಷ್ಟಿ ಬಂದು ವರ್ಷವೇ ಕಳೆದಿದೆ. 'ರಾಮಾಚಾರಿ'ಯಲ್ಲಿ ನಾಯಕಿಗೆ ದೃಷ್ಟಿಯನ್ನು ಮರುಕಳಿಸುವ ಪ್ರಯತ್ನ ಮುಂದುವರಿದಿದೆ. ಸಿರಿ ಕನ್ನಡದಲ್ಲಿ ಡಾಕ್ಟರ್ ಬರೆದು ಕೊಟ್ಟ ಔಷಧಿ ಚೀಟಿಯನ್ನು ಸರಿಯಾಗಿ ಓದಲಾಗದ 'ಮತ್ತೆ ಮಾಯಾಮೃಗ'ದ ಕುಟುಂಬ. ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು'ನಲ್ಲಿ ಕಣ್ಣೆದುರೇ ಮಗ ಇದ್ದರೂ ಗೊತ್ತೇ ಆಗದ ಹಾಗೇ ನಟಿಸುವ ನಾಯಕನ ತಾಯಿ. ಹೀಗೇ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಟ್ಟಾರೆ ಖಳನಾಯಕಿಯರ ಅಬ್ಬರಕ್ಕೆ ಎಲ್ಲರೂ ಕುರುಡಾಗಿದ್ದಾರೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು



## ಕಾನೂನೇ ದಿಕ್ಕು ತಪ್ಪಿತೆ?

ಕಲರ್ಸ್ ಕನ್ನಡದ 'ಗಿಣಿರಾಮ' ಭಿನ್ನವಾಗಿ ಬರುತ್ತಿದೆ. ಆದರೆ, ಇತ್ತೀಚಿನ ದೃಶ್ಯವೊಂದು ಇಷ್ಟವಾಗಲಿಲ್ಲ. ನಾಯಕನ ತಂದೆ ನಿಧನ ಹೊಂದಿದ್ದಾರೆ. ನಾಯಕ ಜೈಲಿನಲ್ಲಿ ಇದ್ದಾನೆ. ಶವಸಂಸ್ಕಾರಕ್ಕೆ ಅವನಿಗೆ ಅವಕಾಶ ಕೊಡದ ಪೊಲೀಸರು ಹಣಕ್ಕಾಗಿ ಹಪಹಪಿಸುತ್ತಾರೆ. ಇದು ಕ್ರೂರ ನಡೆ ಅನ್ನುವುದಕ್ಕಿಂತ ಕಾನೂನಿಗೆ ವಿರುದ್ಧವಾಗಿದೆ. ವೀಕ್ಷಕರಿಗೆ ಕಾನೂನಿನ ಅರಿವನ್ನು ಸರಿಯಾಗಿ ಮೂಡಿಸಬೇಕೆ ವಿನಃ ಕಾನೂನುಬಾಹಿರ ಸಂಗತಿಗಳನ್ನು ತೋರಿಸಿ ದಿಕ್ಕುತಪ್ಪಿಸುವುದು ಖೇದದ ಸಂಗತಿ. ಇಲ್ಲಿ ನಾಯಕ ವಿಚಾರಣಾಧೀನ ಕೈದಿಯಾಗಿದ್ದಾನೆ. ಕುಟುಂಬದವರ ಸಾವಿಗೆ ಹೋಗಲು ಕಾನೂನಿನಲ್ಲಿ ಅವಕಾಶ ಇದೆ. ಮಾತ್ರವಲ್ಲ ಷರತ್ತುಬದ್ಧವಾಗಿ 'ಪೆರೋಲ್' ಮೇಲೆ ಅಲ್ಪಕಾಲ ಬಿಡುಗಡೆಗೂ ಅವಕಾಶ ಇದೆ.

—ಶರ್ಮಿಷ್ಟ ರಘು, ಬೆಂಗಳೂರು

## ನೋಡುಗರ ಸಹನೆ-ಆಸಕ್ತಿ ಪರೀಕ್ಷಿಸದಿರಿ

ಗಂಗಾವತಿ ಪ್ರಾಣೇಶ ಅವರ ಹಾಸ್ಯದ ಮಾತುಗಳನ್ನು ಕನ್ನಡದ ವಾಹಿನಿಗಳು ಬಹುಕಾಲದಿಂದ ಪುನರಾವರ್ತನೆ ಮಾಡುತ್ತಿವೆ. ಅವರ ಕಾರ್ಯಕ್ರಮ ಪ್ರಸಾರ ಮಾಡುವುದರಲ್ಲಿ ವಾಹಿನಿಗಳ ಮಧ್ಯೆ ಸ್ಪರ್ಧೆ ಇದ್ದಂತೆ ಕಾಣುತ್ತಿದೆ. ಕುರಿಗಾಹಿ ಹನುಮಂತ ಅವರ ಗಾಯನ ಕೂಡ ಹಾಗೆಯೇ ಆಗಿತ್ತು. ಆದರೀಗ ಅದು ಕಡಿಮೆ ಆಗಿದೆ. ಈಗ ದಿಯಾ ಮತ್ತು ದಿಶಾ ಹೆಗಡೆ ಪ್ರತಿಭೆಗಳ ಕಾಲ! ಪ್ರತಿಭೆಗಳಿಗೆ ಅವಕಾಶ ಇರಲಿ. ಅದರೆ ಅದು ವೀಕ್ಷಕರ ಸಹನೆ, ಆಸಕ್ತಿಯನ್ನು ಪರೀಕ್ಷಿಸದಿರಲಿ.

—ರಮಾನಂದ ಶರ್ಮಾ, ಬೆಂಗಳೂರು

## ಆನಂದ ನೀಡಿದ 'ರೂಪಾಂತರ ಗಾಯನ'

ಚಂದನದ 'ಮರೆಯದ ಮಾಣಿಕ್ಯ'ದ ಇತ್ತೀಚಿನ ಸಂಚಿಕೆ ಒಂದರಲ್ಲಿ ತಾಯಿ–ಮಗಳ ಹಾಡುಗಾರಿಕೆ ಬಲು ಸೊಗಸಾಗಿ ಮೂಡಿಬಂತು. ಹಾಡೊಂದರಲ್ಲಿ ಬೀನಾ ಬಾದಾಮಿ ಅವರು ಮಗುವಿನ ಧ್ವನಿಯಲ್ಲಿ ಹಾಗೂ ಮಗಳು ಆಕಾಂಕ್ಷಾ ಬಾದಾಮಿ ತಮ್ಮ ತಾಯಿಯ ಧ್ವನಿಯಲ್ಲಿ ಹಾಡಿದ್ದು ಅದ್ಭುತವಾಗಿತ್ತು.

ಇದರ ಜೊತೆ ಅವರು ವಚನ ಮತ್ತು ಕೆಲವು ಗೀತೆಗಳ ಗಾಯನ ಮಾಡಿದರು. ಮಕ್ಕಳು ಕಲಿಯುವ ಆಸಕ್ತಿಯನ್ನು ಹೆಚ್ಚಿಸಿಕೊಳ್ಳಲಿ ಎಂಬ ದೃಷ್ಟಿಯಿಂದ ಗಝಲ್ ಬೇರೆಯ ಶೈಲಿಗೆ ಅಳವಡಿಸುವ ಪ್ರಯೋಗ, ಅದನ್ನು ಬೇರೆ ಭಾಷೆಗಳಿಗೆ ತರ್ಜುಮೆಗೊಳಿಸಿ ಹಾಡುವುದನ್ನು ಕೇಳಿ ಆನಂದವಾಯಿತು.

—ಆಶಾ ಅಪ್ರಮೇಯ, ದಾವಣಗೆರೆ

'ಮರೆಯದ ಮಾಣಿಕ್ಯ' ಜನಪ್ರಿಯ ಕಾರ್ಯಕ್ರಮ. ಅದರಲ್ಲಿ ಕೆಲವೊಮ್ಮೆ ನಿರೂಪಕರ ಅತಿ ಮಾತು ಅನವಶ್ಯ. ಒಮ್ಮೊಮ್ಮೆ ಅವರೇ ಹಾಡುತ್ತಾರೆ. ಅದರಲ್ಲೂ ಹಿಂದಿ ಸಿನಿಮಾ ಗೀತೆಗಳನ್ನು ಹಾಡುತ್ತಾರೆ. ಕನ್ನಡದ ಕಾರ್ಯಕ್ರಮದಲ್ಲಿ ಇದು ಅಗತ್ಯವೇ?

—ಕೆ.ಎಸ್. ಸೋಮೇಶ್ವರ, ಬೆಂಗಳೂರು